ಪ್ರಕಟಣೆ :
ವೃಕ್ಷಲಕ್ಷ ಆಂದೋಲನ ಕರ್ನಾಟಕ,
ಅರಣ್ಯ ಇಲಾಖೆ ರಸ್ತೆ ಸಾಗರ-577401
ಜೂನ್ - ಜುಲೈ 2013

# ಹಸಿರುಹೆಜ್ಜೆ

## ಪಶ್ಚಿಮಘಟ್ಟದ ವಾರ್ತಾ ಪತ್ರ

ಸಹಕಾರ :
ಗ್ರಾಮ ಭಾರತಿ ಟ್ರಸ್ಟ್, ಕಾರಣಗಿರಿ.
ಹೊಸನಗರ ತಾಲೂಕು,

## ಸಾಗರದಲ್ಲಿ 15-6-2013 ರಂದು ಅಧ್ಯಯನ ವರದಿ ಬಿಡುಗಡೆ




## ಶಿವಮೊಗ್ಗಾ ಜಿಲ್ಲೆಯ ಅರಣ್ಯ ಪರಿಸ್ಥಿತಿ ಅಧ್ಯಯನ ವರದಿ

### ಹಿನ್ನೆಲೆ :

ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ಅಧ್ಯಯನ ಕೇಂದ್ರದ ವಿಜ್ಞಾನಿಗಳ ತಂಡ ಶಿವಮೊಗ್ಗಾ ಜಿಲ್ಲೆಯ ಅರಣ್ಯ ಪರಿಸ್ಥಿತಿಯ ಅಧ್ಯಯನ – ವಿಶ್ಲೇಷಣೆ ನಡೆಸಿದೆ. ಅರಣ್ಯ ಇಲಾಖೆ ಪಶ್ಚಿಮಘಟ್ಟ ಕಾರ್ಯಪಡೆ 2012ರ ಆರಂಭದಲ್ಲಿ ಈ ಅಧ್ಯಯನ ನಡೆಸಲು ಜವಾಬ್ದಾರಿ ನೀಡಿ ಪ್ರಾಯೋಜನೆ ಮಾಡಿತ್ತು. ಡಾ॥ ಟಿ.ವಿ. ರಾಮಚಂದ್ರ, ಡಾ॥ ಸುಭಾಸ್ ಚಂದ್ರನ್ ನೇತೃತ್ವದ ವಿಜ್ಞಾನಿಗಳ ತಂಡ ನಿರಂತರ ಅಭ್ಯಾಸ, ಅರಣ್ಯ ಸಮೀಕ್ಷೆ ಮಾಹಿತಿ ಸಂಗ್ರಹ ನಡೆಸಿತು.ಅರಣ್ಯ ಇಲಾಖೆ ಅಧಿಕಾರಿಗಳು, ಗ್ರಾಮ ಅರಣ್ಯ ಸಮಿತಿಗಳು, ವೃಕ್ಷಲಕ್ಷ ಆಂದೋಲನದ ಕಾರ್ಯಕರ್ತರು ಸ್ಥಾನಿಕವಾಗಿ ಅಧ್ಯಯನಕ್ಕೆ ಸಹಕಾರ ನೀಡಿದ್ದಾರೆ.

2012ರ ಮೇನಲ್ಲಿ ಆರಂಭಿಕ ಸಮಾಲೋಚನೆ ಸಭೆಯನ್ನು ಶಿವಮೊಗ್ಗಾದಲ್ಲಿ ನಡೆಸಲಾಗಿತ್ತು. ಮಧ್ಯಂತರ ವರದಿಯನ್ನು ಸಾಗರದಲ್ಲಿ ಪರಿಸರ ಸಂಘ-ಸಂಸ್ಥೆಗಳು ಮತ್ತು ಅಧಿಕಾರಿಗಳ ಸಭೆಯಲ್ಲಿ ಮಂಡಿಸಲಾಯಿತು. ಭಾರತೀಯ ವಿಜ್ಞಾನ ಸಂಸ್ಥೆ 2013ರ ಮೇನಲ್ಲಿ ಈ ವರದಿಯನ್ನು ಅಖೈರುಗೊಳಿಸಿದೆ. 2013ರ ಜೂನ್‌ನಲ್ಲಿ ರೈತರು, ಸಂಘ ಸಂಸ್ಥೆಗಳ ಸಭೆಯಲ್ಲಿ ಸಾಗರದಲ್ಲಿ ಅಂತಿಮ ವರದಿಯನ್ನು ಮಂಡಿಸಲಾಯಿತು.

**ಅಧ್ಯಯನಕಾರರು :** ಡಾ॥ ಟಿ.ವಿ. ರಾಮಚಂದ್ರ ಡಾ॥ ಸುಭಾಸ್ ಚಂದ್ರನ್, ಶ್ರೀ। ಭರತ್, ಶ್ರೀ ಜಿ.ಆರ್. ರಾವ್, ಶ್ರೀ ಸುದರ್ಶನ್, ಶ್ರೀ ವಿಷ್ಣು ಇವರು ಅಧ್ಯಯನಕಾರರಾಗಿ ಕಾರ್ಯನಿರ್ವಹಿಸಿದ್ದಾರೆ.

**ವರದಿಯ ಅಧ್ಯಾಯಗಳು :** 463 ಪುಟಗಳ ಸಮಗ್ರ ವರದಿಯಲ್ಲಿ ಮುಖ್ಯ ಅಂಶಗಳ ವರದಿ, ಪ್ರಸ್ತಾವನೆ, ನದಿಗಳು, ಜನಸಂಖ್ಯೆ, ಹವಾಮಾನ, ಭೂ ಪರಿಸ್ಥಿತಿ, ಅದಿರು, ಸಸ್ಯಸಂಪತ್ತು, ಭೂಮಿ ವಿಂಗಡಣೆ, ಭೂಮಿ ಛಿದ್ರಗೊಳ್ಳುವಿಕೆ, ಅರಣ್ಯ ಅತಿಕ್ರಮಣ, ಅರಣ್ಯ ನಿರ್ವಹಣೆ, ಈಗಿನ ಸ್ಥಿತಿ, ಈ ಹಿಂದಿನ ಅರಣ್ಯ ನಿರ್ವಹಣೆ ಪದ್ಧತಿ, ವನ್ಯಜೀವಿ ಪರಿಸ್ಥಿತಿ, ಅರಣ್ಯ ನಿರ್ವಹಣಾ ಯೋಜನೆ, ಅರಣ್ಯೇತರ ಉದ್ದೇಶಕ್ಕೆ ಅರಣ್ಯ ನೀಡಿಕೆ, ನೆಡುತೋಪುಗಳು, ಶೆಟ್ಟಿಹಳ್ಳಿ, ಶರಾವತಿ ಅಭಯಾರಣ್ಯ, ಗುಡವಿ ಪಕ್ಷಿಧಾಮ, ಕಾನು ಅರಣ್ಯಗಳು, ದೇವರ ಕಾಡುಗಳು ಈ ಎಲ್ಲ ಅಂಶಗಳನ್ನು ವರದಿ ಒಳಗೊಂಡಿದೆ.

ಅಧ್ಯಯನ ವರದಿ ಹಲವು ಅಂಕಿ ಸಂಖ್ಯೆ, ನಕಾಶೆ, ಆಧಾರಗಳನ್ನು ಒಳಗೊಂಡಿದೆ. ಕೆಲವು ಕಾನುಗಳ ಕೇಸ್ ಸ್ಟಡಿಗಳು ಇಲ್ಲಿವೆ. ಶರಾವತಿ ಕಣಿವೆಯ ಇಂಧನ ಪರಿಸ್ಥಿತಿ ಬಗ್ಗೆ ಮಾಹಿತಿ ಇದೆ.

## ಶಿವಮೊಗ್ಗಾ ಜಿಲ್ಲೆ ಅರಣ್ಯ ಪರಿಸ್ಥಿತಿ: ಸಂಗ್ರಾಹ್ಯ ವರದಿ- ನಿರ್ಣಯಗಳು:

- ಪಶ್ಚಿಮ ಘಟ್ಟದ ಸಸ್ಯ ವನ್ಯಜೀವಿ ವೈವಿಧ್ಯ ಜಾಗತಿಕವಾಗಿ ಪ್ರಸಿದ್ಧಿ ಮಹತ್ವ ಹೊಂದಿದೆ. ಜಗತ್ತಿನ ಅತಿ ಹೆಚ್ಚು ಜೀವ ವೈವಿಧ್ಯ ಹೊಂದಿದ 8 ಅತ್ಯಂತ ಅಪರೂಪದ ಸ್ಥಳಗಳಲ್ಲಿ ಸಹ್ಯಾದ್ರಿ ಒಂದಾಗಿದೆ. ಇಲ್ಲಿ ಹೂ ಬಿಡುವ 4000 ಜಾತಿಯ ಸಸ್ಯ ವರ್ಗ ಇದೆ. ಇವುಗಳಲ್ಲಿ ಮಧ್ಯ ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಶಿವಮೊಗ್ಗಾ, ಚಿಕ್ಕಮಗಳೂರು ಉ.ಕ. ಜಿಲ್ಲೆಯ ಅರಣ್ಯ ಪ್ರದೇಶಗಳು ಬರುತ್ತವೆ.
- ಶಿವಮೊಗ್ಗಾ ಜಿಲ್ಲೆಯ ಅರಣ್ಯ ಪ್ರದೇಶಗಳು ಮಲೆನಾಡಿನ ಪ್ರದೇಶ ಎಂದು ಕರೆಸಿಕೊಳ್ಳುತ್ತವೆ. ಆರ್ಥಿಕವಾಗಿ ಮತ್ತು ಪರಿಸರ ಸೇವೆಗಳಿಗೆ ಈ ಅರಣ್ಯಗಳು ಪ್ರಮುಖ ಪಾತ್ರವಹಿಸುತ್ತವೆ. ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಎಂದು ಹೆಸರು ಪಡೆದ ಆಗುಂಬೆ (8276ಮಿ.ಮೀ.) ಇದೇ ವ್ಯಾಪ್ತಿಯಲ್ಲಿದೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಎಲ್ಲ ರೀತಿಯ ಅರಣ್ಯ ಪ್ರದೇಶಗಳಿವೆ. ನಿತ್ಯ ಹರಿದ್ವರ್ಣ, ಕುರುಚಲು, ಭಾಗಶಃ ಹರಿದ್ವರ್ಣ, ಹಾಳಾಗುತ್ತಿರುವ ಅರಣ್ಯ ಹೀಗೆ ಹಲವು ಪರಿಸ್ಥಿತಿಯ ಅರಣ್ಯಗಳಿವೆ.

- ಶಿವಮೊಗ್ಗಾ ಜಿಲ್ಲೆಯಲ್ಲಿ 1973 ರಲ್ಲಿ 43% ಅರಣ್ಯವಿತ್ತು. 2012ರಲ್ಲಿ 22.33% ಅರಣ್ಯ ಮಾತ್ರ ಉಳಿದುಕೊಂಡಿದೆ. ಭದ್ರಾವತಿ ಅರಣ್ಯ ವಿಭಾಗದಲ್ಲಿ ಮಾನವ ಹಸ್ತಕ್ಷೇಪ ಅತಿ ಹೆಚ್ಚಿದೆ.
- ಅತ್ಯಂತ ಒಳಪ್ರದೇಶದ ಕಾಡುಗಳೂ ಕಳೆದ 40 ವರ್ಷಗಳಲ್ಲಿ 12% ಕಣ್ಮರೆ ಆಗಿವೆ.
- ಪಶ್ಚಿಮ ಘಟ್ಟದ ಅಳಿವಿನ ಅಂಚಿನ ಪ್ರಭೇದಗಳನ್ನು ಉಳಿಸಲು ಗಂಭೀರ ಕಾರ್ಯಕ್ರಮಗಳು, ಆದ್ಯತೆ ಬೇಕೆ ಬೇಕು. ಇನ್ನಷ್ಟು ಅರಣ್ಯಗಳು ಛಿದ್ರವಾಗುವುದನ್ನು ತಡೆಗಟ್ಟಬೇಕು.
- ಅಪಾರ ಜಲಮೂಲಗಳಿರುವ ಈ ಅರಣ್ಯಗಳ ನಿರ್ವಹಣೆಯ ನೀತಿಗಳನ್ನು ಪುನರ್ ವಿಮರ್ಶೆ ಮಾಡಲೇಬೇಕು. ಯಾಕೆಂದರೆ ಇಲ್ಲಿನ ನದೀ ಕಣಿವೆಗಳು, ಹೊಳೆ ಹಳ್ಳಗಳು, ರಾಜ್ಯಕ್ಕೆ , ದಕ್ಷಿಣ ಭಾರತಕ್ಕೆ ಬಯಲು ನಾಡಿಗೆ ನೀರುಣಿಸುತ್ತವೆ.
- ಇಲ್ಲಿ ಅರಣ್ಯ ಹಳ್ಳ- ತೊರೆಗಳ ನಿರ್ವಹಣೆ ಮಾಡುವಲ್ಲಿ ಇಲ್ಲಿನ ವನವಾಸಿಗಳು, ಸ್ಥಾನಿಕ ರೈತರ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ಥಾನಿಕರಿಗೆ ಕಾರ್ಬನ ಕ್ರೆಡಿಟ್ ಸಿಗುವಂತಾಗಬೇಕು.
- ಅತ್ಯಂತ ಅಪರೂಪದ ಜೈವಿಕ ಸಂಪತ್ತು ಇರುವ ಪಶ್ಚಿಮಘಟ್ಟದ ಈ ಕಾಡುಗಳ ನಿರ್ವಹಣೆಗೆ ಸಮಗ್ರ ಪರಿಸರ ನಿರ್ವಹಣಾ ಯೋಜನೆಯ ಅವಶ್ಯಕತೆಯನ್ನು ಎತ್ತಿ ಹೇಳಲಾಗಿದೆ.
- ನಿರಂತರವಾಗಿ ಇಡೀ ವರ್ಷ ನೀರಿನ ಹರಿವು ಇರಲು ಹಾಗೂ ಅಪಾರ ಜೀವ ವೈವಿಧ್ಯ ಉಳಿಯಲು ಸರಿಯಾದ ನಿರ್ವಹಣಾ ಯೋಜನೆ ಬಂದರೆ ಮಾತ್ರ (ಈಗಾಗಲೇ ಬಹಳಷ್ಟು ಅರಣ್ಯ ನಾಶ ಆಗಿದೆ) ಉಳಿದಿರುವ ನಿತ್ಯಹರಿದ್ವರ್ಣ, ಭಾಗಶಃ ಹಸಿರು ಅರಣ್ಯ ರಕ್ಷಣೆ ಸಾಧ್ಯ.
- ಶಿವಮೊಗ್ಗಾ ಜಿಲ್ಲೆಯ ಒಂದಾನೊಂದು ಕಾಲದ ದೇವರಕಾನುಗಳೇ ಇದಕ್ಕೆ ತಾಜಾ ಉದಾಹರಣೆ. ಬಹಳಷ್ಟು ಪಾರಿಸಾರಿಕ ಸೇವೆ ನೀಡುತ್ತಿದ್ದ ಕಾನುಗಳು ಇಂದು ಕೆಲವು ಮಾತ್ರ ಉಳಿದುಕೊಂಡಿವೆ.
- ಬ್ರಿಟಿಷರ ಆಡಳಿತದಲ್ಲಿ ಜನತೆಯ ನಿರ್ವಹಣೆ ತಪ್ಪಿಸಿ ಅರಣ್ಯ ನಿರ್ವಹಣೆಯನ್ನು ಸರ್ಕಾರವೇ ವಹಿಸಿಕೊಂಡಿತು. ಇದರಿಂದಾಗಿ ಸ್ಥಾನಿಕ ಜನತೆ ಆಸಕ್ತಿ ಕಳೆದುಕೊಂಡಿತು.
- ಈವರೆಗೆ ಶಿವಮೊಗ್ಗಾ ಜಿಲ್ಲೆಯಲ್ಲಿ ಆಗಿರುವ ಅರಣ್ಯ ಅತಿಕ್ರಮಣ 36102 ಹೆಕ್ಟೇರ್.
- ಇವುಗಳಲ್ಲಿ ಭದ್ರಾವತಿ ಅರಣ್ಯ ವಿಭಾಗದಲ್ಲಿ 24% ಅರಣ್ಯ ಅತಿಕ್ರಮಣ ಇದೆ.
  ವರದಾ ಮತ್ತು ಶರಾವತಿ ಕಣಿವೆಗಳಲ್ಲಿ ಅರಣ್ಯ ಛಿದ್ರವಾಗಿ ಹಳ್ಳ, ತೊರೆಗಳ ನಾಶವಾಗಿದೆ. ಈ ನದಿಗಳ, ಉಪನದಿಗಳು, ಹೊಳೆಗಳ ಜಲಾನಯನ ರಕ್ಷಣೆ, ನದೀ ಪಾತ್ರದ ಸಸ್ಯ ವೈವಿಧ್ಯ ಉಳಿಸಲು ಜರೂರು ಕ್ರಮಬೇಕು.
- ರಾಂಪತ್ರೆ ಜಡ್ಡಿಗಳು, ಕತ್ತಲೆ ಕಾನ್ಸಿನ್ ನಂಥ ವೃಕ್ಷ ಜಾತಿಗಳು ಕೆಲವೇ ಉಳಿದಿದ್ದು ಬಹಳ ನಾಶಹೊಂದಿವೆ, ಗ್ರಾಮ ಅರಣ್ಯ ಸಮಿತಿಗಳ ಮೂಲಕ ಅರಣ್ಯ ನಿರ್ವಹಣೆಯಲ್ಲಿ ಜನತೆ ಪಾಲ್ಗೊಳ್ಳಬೇಕು.
- ದಾಲ್ಚಿನ್ನಿ, ಹಾಲ್ಮಡ್ಡಿ, ಜೇನು, ಉಪ್ಪಾಗೆ, ಮುರುಗಲು, ಬಿದಿರು, ಬೆತ್ತ ಮುಂತಾದ ಅರಣ್ಯ ಉಪ ಉತ್ಪನ್ನಗಳನ್ನು ಹಾನಿಕಾರಕ ರೀತಿಯಲ್ಲಿ ಸಂಗ್ರಹಮಾಡುವ ಗುತ್ತಿಗೆ ನೀಡುವ ಪದ್ಧತಿಗಳನ್ನು ಕೈಬಿಡಬೇಕು. ಸ್ಥಾನಿಕ ಜನರಿಗೆ ಸುಸ್ಥಿರ ಉಪ ಅರಣ್ಯ ಉತ್ಪತ್ತಿ ಸಂಗ್ರಹ ಜವಾಬ್ದಾರಿ ನೀಡಬೇಕು.
- **ಅರಣ್ಯ ಉತ್ಪನ್ನ ಸಂಗ್ರಹ ಅವೈಜ್ಞಾನಿಕವಾಗಿದೆ** : ವಿನಾಶಕಾರೀ ಸಂಗ್ರಹ ಪದ್ಧತಿ ಕೈಬಿಡಬೇಕು, ಅಪರೂಪದ ವಿನಾಶದ ಅಂಚಿನ ಔಷಧೀ ಮೂಲಿಕೆಗಳ ಸಂಗ್ರಹ ನಿಲ್ಲಿಸಬೇಕು. ಹರಾಜು ಪದ್ಧತಿ ಕೈಬಿಡಬೇಕು. ಸುಸ್ಥಿರವಾದ ಸಂಗ್ರಹಕ್ಕೆ ಸಮಗ್ರ ಯೋಜನೆಯನ್ನು ವರ್ಕಿಂಗ್ ಪ್ಲ್ಯಾನ್‌ನಲ್ಲಿ ಸೇರಿಸಬೇಕು.
- ಈ ಹಿಂದೆ ಶರಾವತಿ ಅಭಯಾರಣ್ಯದಲ್ಲಿ ಅಕೇಶಿಯಾದಂಥ ಏಕ ಜಾತಿ ನೆಡುತೋಪು ಬೆಳೆಸಿರುವುದು ವನ್ಯಜೀವಿ ರಕ್ಷಣೆ ದೃಷ್ಟಿಯಿಂದ ತಪ್ಪು ಕ್ರಮವಾಗಿದೆ.
- ಬೇಟೆ ಮತ್ತು ಅತಿಕ್ರಮಣ, ಮರಗಳ್ಳತನ ತಡೆಗೆ ವನ್ಯಜೀವಿ ಸಂರಕ್ಷಿತ ಪ್ರದೇಶಗಳಲ್ಲಿ ವಿಶೇಷ ಗಮನ, ಕ್ರಮಬೇಕು.
- ಶರಾವತಿ ಅಭಯಾರಣ್ಯ, ಶೆಟ್ಟಿಹಳ್ಳಿ ಹಾಗೂ ಗುಡವಿ ಪಕ್ಷಿಧಾಮದಲ್ಲಿ ಸ್ಥಾನಿಕ ವನವಾಸಿ ರೈತರ ಪರಿಸರ ಅಭಿವೃದ್ಧಿ ಸಮಿತಿ ರಚಿಸಿ ಅವರ ಸಹಕಾರ ಪಡೆಯಬೇಕು.

- ಮಾನವ ವನ್ಯ ಜೀವಿ ಸಂಘರ್ಷ ಶಿವಮೊಗ್ಗಾ ಜಿಲ್ಲೆಯ ಅರಣ್ಯ ಅಂಚಿನ ಪ್ರದೇಶಗಳಲ್ಲಿ ಮಿತಿಮೀರಿದೆ. ರೈತರ ಪ್ರಾಣ ಹಾಗೂ ಬೆಳೆ ರಕ್ಷಣೆ ದೊಡ್ಡ ಸಮಸ್ಯೆ ಎನಿಸಿದೆ. ಅದೆ ಹೊತ್ತಿಗೆ ವನ್ಯ ಜೀವಿಗಳ ರಕ್ಷಣೆ, ಪರಿಹಾರ, ಸೌರಬೇಲಿ ಹಾಗೂ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಕ್ರಮ ಇವೆಲ್ಲ ಜರೂರಾಗಿದೆ.
- ಶಿವಮೊಗ್ಗಾ ಜಿಲ್ಲೆಯಲ್ಲಿ ಏಕಜಾತಿ ಕೈಗಾರಿಕಾ ನೆಡು ತೋಪುಗಳು ಮಲೆನಾಡಿನ ಸ್ವಾಭಾವಿಕ ಜೀವ ವೈವಿಧ್ಯ, ಹುಲ್ಲುಗಾವಲುಗಳ ನಾಶಕ್ಕೆ ಕಾರಣವಾಗಿದೆ. ಕೊಡಚಾದ್ರಿ, ಮಡೆನೂರು ಗಳಲ್ಲಿ ಹುಲ್ಲುಗಾವಲು ಇರುವ ಪ್ರದೇಶಗಳಲ್ಲಿ ನೆಡುತೋಪುಗಳು ಬಂದಿದೆ. ಜಾನುವಾರಿಗೆ ಸಹಾ ಮೇಯಲು ಹುಲ್ಲುಗಾವಲು ಇಲ್ಲ.
- ಬಯಲು ಭೂಮಿಯಲ್ಲಿ ಮಾತ್ರ ಮೈಸೂರು ಕಾಗದ ಕಾರ್ಖಾನೆಗೆ ನೆಡುತೋಪು ಬೆಳೆಸಲು ಅವಕಾಶ ನೀಡಬೇಕು.
- ಕೈಗಾರಿಕಾ ನೆಡುತೋಪು ನಿರ್ಮಾಣದಲ್ಲಿ ಬೆಂಕಿಹಾಕಿ ಸುಡುವುದು, ಬುಲ್ಡೋಜರ್ ಬಳಕೆ ನಿಲ್ಲಿಸಬೇಕು. ಜೀವ ವೈವಿಧ್ಯ ನಾಶ, ಮಣ್ಣು ಸವಕಳಿ ತಡೆಗೆ ಈ ಕ್ರಮ ಅವಶ್ಯ.
- ಕಾಡಿನ ಬೆಂಕಿ ಹೆಚ್ಚಾಗಲು ದಟ್ಟಾರಣ್ಯ ನಾಶವಾಗಿ ಕುರುಚಲು ಅರಣ್ಯವಾಗಿದ್ದು ಕಾರಣ, ಅತಿಯಾದ ಮಾನವ ಹಸ್ತಕ್ಷೇಪವೇ ಇದಕ್ಕೆ ಕಾರಣ. ಕಾಡಿನ ಬೆಂಕಿಯಿಂದ ದೊಡ್ಡ ಮರಗಳಿಗೆ ಅನಾಹುತ ಆಗದಿದ್ದರೂ ಬಳ್ಳಿ, ಗಿಡಗಂಟಿ, ಚಿಕ್ಕ ಸಸ್ಯ ಸಮೂಹಗಳು, ಔಷಧೀ ಸಸ್ಯಗಳು ಪೂರ್ಣ ಸುಟ್ಟು ಹೋಗುತ್ತವೆ. ಶಿವಮೊಗ್ಗಾ ಜಿಲ್ಲೆಯ ಹಳ್ಳಿಗಳ ಅಂಚಿನ ಕಾಡುಗಳನ್ನು ಬೆಂಕಿಯಿಂದ ಸಂರಕ್ಷಣೆ ಮಾಡಲು ಜನರ ಸಹಕಾರ ಅತಿ ಮುಖ್ಯವಾಗಿದೆ.
- ಶರಾವತಿ, ಮೂಕಾಂಬಿಕಾ ಹಾಗೂ ಈಗ ಹೊಸತಾಗಿ ರಚನೆಗೊಂಡ ಅಘನಾಶಿನಿ ಅಭಯಾರಣ್ಯಗಳ ಮಧ್ಯೆ ವನ್ಯ ಜೀವಿಗಳಿಗೆ ಸರಾಗವಾಗಿ ಓಡಾಡಲು ಸಂಪರ್ಕ ದಾರಿಗಳು, ಅವಶ್ಯ ಆಹಾರ, ನೀರಿನ ಸೌಲಭ್ಯ ಬೇಕು. ಹಣ್ಣು ಹಂಪಲು ಸಸ್ಯಗಳನ್ನು ಅಲ್ಲಲ್ಲಿ ನೆಡಬೇಕು. ಹುಲ್ಲುಗಾವಲು ನಾಶವಾಗಲು ಅವಕಾಶ ನೀಡಬಾರದು. ಕಾಡಿನಲ್ಲಿರುವ ಕೆರೆಗಳ ರಕ್ಷಣೆಗೆ ವ್ಯಾಪಕ ಕಾರ್ಯಕ್ರಮ ರೂಪಿಸಬೇಕು.
- ಶಿವಮೊಗ್ಗಾ ಜಿಲ್ಲೆಯಲ್ಲಿ ವ್ಯಾಪಕ ಅರಣ್ಯ ನಾಶವಾಗಿದ್ದರಿಂದ ಕ್ಯಾಸನೂರು ಅರಣ್ಯ ಕಾಯಿಲೆಗಳಂಥ ರೋಗಗಳು ಬಂದಿವೆ.
- ಮಲೆನಾಡಿನ ಜನತೆ ಇಂಧನಕ್ಕಾಗಿ ಕಾಡಿನ ಮೇಲೆ ಅವಲಂಬಿಸುವದು ತಪ್ಪಬೇಕು. ಅದಕ್ಕಾಗಿ ಬಯೋಗ್ಯಾಸ್. ಸೌರಶಕ್ತಿ, ಸರಳ ಒಲೆ ಮುಂತಾದ ಸುಧಾರಿತ ಇಂಧನ ಪದ್ಧತಿ ಅಳವಡಿಕೆಗೆ ಈಗ ಪಶ್ಚಿಮಘಟ್ಟ ಕಾರ್ಯಪಡೆ, ಅರಣ್ಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಇಲಾಖೆ ಕೈಗೊಂಡ ಯೋಜನೆಗಳಿಗೆ ಎಲ್ಲಿಲ್ಲದ ಮಹತ್ವ ನೀಡಬೇಕು.
- ಅಕ್ರಮ ಕ್ವಾರಿಗಳು ಹಾಗೂ ಅಕ್ರಮ ಮರಳುಗಾರಿಕೆ ನಿಲ್ಲದಿದ್ದರೆ ಅರಣ್ಯ. ನದೀ ಪಾತ್ರಗಳು ಶಿವಮೊಗ್ಗಾ ಜಿಲ್ಲೆಯಲ್ಲಿ ಬಹು ಶೋಷಣೆಗೆ ಒಳಗಾಗುತ್ತವೆ. ನಾಶವಾಗುತ್ತವೆ.
- ಚಿಕ್ಕ ಚಿಕ್ಕ ಮಲೆನಾಡ ಕೆರೆಗಳ ರಕ್ಷಣೆ–ಅಭಿವೃದ್ಧಿ ಅವಶ್ಯ. ಕೃಷಿಗೆ ಮತ್ತು ಕುಡಿಯುವ ನೀರಿಗೆ ಈ ಕೆರೆಗಳ ಉಳಿವು ಮುಖ್ಯ.
- ಹಳ್ಳ–ತೊರೆಗಳನ್ನು ಕಾಡಿನಿಂದ ತಿರುಗಿಸುವುದು, ನೀರಾವರಿಗೆ ಉಪಯೋಗಿಸುವದು ಇತ್ಯಾದಿಗಳಿಂದ ಸದಾ ಹರಿಯುವ ಹಳ್ಳಗಳು ಬತ್ತಲು ಕಾರಣವಾಗುತ್ತವೆ. ನದೀ ಪಾತ್ರದ ಅರಣ್ಯ ಕುಂಠಿತವಾಗುತ್ತದೆ.
- ಶರಾವತಿ ನದೀ ಕಣಿವೆ ಕಾಡಿನ ಹಣ್ಣು ಜಾತಿಯ ತಳಿಗಳ ಬೃಹತ್ ಸಂಗ್ರಹಾಲಯವಾಗಿದೆ. ಮಾವು, ಹಲಸು, ಅಪ್ಪೇಮಿಡಿ, ಮೆಣಸು, ಮುರುಗಲು, ದಾಲ್ಚಿನ್ನಿ, ಲವಂಗ, ಶುಂಠಿ ಅರಿಶಿಣ ಮುಂತಾದ ಅಪರೂಪದ ಸಾಂಪ್ರದಾಯಿಕ ತಳಿಗಳ ಉಳಿವಿಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕು.
- ಶಿವಮೊಗ್ಗಾ ಜಿಲ್ಲೆಯಲ್ಲಿ ಹೆಚ್ಚಿರುವ ಮಲೆನಾಡು ಗಿಡ್ಡದಂಥ ದೇಶೀ ಪಶ್ಚಿಮ ಘಟ್ಟದ ಜಾನುವಾರು ತಳಿಗಳ ರಕ್ಷಣೆಗೆ ಇನ್ನಷ್ಟು ಕ್ರಿಯಾಶೀಲ ಕ್ರಮಬೇಕು.
- ಸರಾಸರಿ 4 ದನಗಳನ್ನು 88% ರೈತರು ಹೊಂದಿದ್ದಾರೆ. ಇವರಿಗೆ ಗೋಬರ್ ಗ್ಯಾಸ್ ನಿರ್ಮಿಸಲು ಎಲ್ಲ ಸೌಲಭ್ಯ ನೀಡಬೇಕು. ಇಂಧನ ಬೇಡಿಕೆ ಪೂರೈಸಲು ಇನ್ನಷ್ಟು ವನೀಕರಣ ಅತ್ಯವಶ್ಯ.
- ಶಿವಮೊಗ್ಗಾ ಜಿಲ್ಲೆಯಲ್ಲಿ ಅತಿಯಾದ ಹೈಬ್ರೀಡ ಜಾತಿಯ ಬೀಜ ಬಳಸುವಿಕೆ, ಕೃಷಿ, ತೋಟಗಾರಿಕೆಗಾಗಿ ಬಹಳ ರಾಸಾಯನಿಕ ಔಷಧಿ ಸಿಂಪಡಣೆ ಇತ್ಯಾದಿಗಳಿಂದ ದೇಶೀ ಕೃಷಿ ತೋಟಗಾರಿಕಾ ತಳಿಗಳು ಕಣ್ಮರೆ ಆಗುತ್ತಿವೆ. ಉದಾ: ಅತಿಯಾದ ಶುಂಠಿ, ಹತ್ತಿ ಬೆಳೆಗಳು ಬಂದಿದ್ದರಿಂದ ಭೂಮಿ ತನ್ನ ಫಲವತ್ತತೆ ಕಳೆದುಕೊಳ್ಳುತ್ತಿದೆ. ಹಳ್ಳ, ಕೆರೆ, ಹೊಳೆಗಳಿಗೆ ರಾಸಾಯನಿಕಗಳು ಹೆಚ್ಚು ಹೆಚ್ಚು ಸೇರ್ಪಡೆ ಆಗುತ್ತಿವೆ. ಮನುಷ್ಯ, ಜಾನುವಾರು, ಜೇನು, ವನ್ಯಜೀವಿ, ಸಸ್ಯ ಸಂಪತ್ತಿನ ಮೇಲೂ ಇವುಗಳ ದುಷ್ಪರಿಣಾಮ ಗೋಚರಿಸುತ್ತಿದೆ. ಇನ್ನಷ್ಟು ಅಧ್ಯಯನ, ಮೌಲ್ಯಮಾಪನಗಳ ಅವಶ್ಯಕತೆ ಇದೆ. ಸಾವಯವ ಕೃಷಿಯ ಅಗತ್ಯತೆ ಇನ್ನಷ್ಟು ಹೆಚ್ಚಿದೆ.
- ಕಾನು ಅರಣ್ಯಗಳು ಶಿವಮೊಗ್ಗ ಜಿಲ್ಲೆಯಲ್ಲಿ ಈ ಹಿಂದೆ ನಿತ್ಯಹರಿದ್ವರ್ಣ ಕಾನುಗಳಾಗಿದ್ದವು. ಆಯಾ ಗ್ರಾಮದ ನಿತ್ಯದ ಅವಶ್ಯಕತೆ ಪೂರೈಸುತ್ತಿದ್ದವು. ನಿರ್ವಹಣೆ ಅಲ್ಲಿನ ಜನರದ್ದೇ ಆಗಿತ್ತು. ಶಿವಮೊಗ್ಗಾ ಜಿಲ್ಲೆ ಸೊರಬದಲ್ಲಿ, ಸಾಗರ, ತೀರ್ಥಹಳ್ಳಿಗಳಲ್ಲಿ ಕಾನುಗಳನ್ನು ಬೇರೆ ಬೇರೆ ಹೆಸರಲ್ಲಿ ಕರೆದರೂ ಇವೆಲ್ಲ ಬಹುತೇಕ ರೆವೆನ್ಯೂ ಇಲಾಖೆಗೆ ಒಳಪಡುತ್ತವೆ. ಇತ್ತೀಚೆಗೆ ಜನರ ಸಹಭಾಗಿತ್ವದಲ್ಲಿ ದೇವರ ಕಾನು ರಕ್ಷಣಾ ಯೋಜನೆಯನ್ನು ಅರಣ್ಯ ಇಲಾಖೆ ಪಶ್ಚಿಮಘಟ್ಟ ಕಾರ್ಯಪಡೆ ಜಾರಿ ಮಾಡಿದೆ. ಇದು 12000 ಎಕರೆ ಕಾನು ಅರಣ್ಯ ಉಳಿಸಲು ಸಹಾಯವಾಗಿದೆ.

- ಇನ್ನೂ ಸುಮಾರು 80000 ಎಕರೆ ಕಾನು ಅರಣ್ಯಗಳ ರಕ್ಷಣೆಗೆ ಜನರ ಸಹಭಾಗಿತ್ವದ ಯೋಜನೆ ರೂಪಿಸಬೇಕು. ಜಲಮೂಲ ರಕ್ಷಣೆ, ಕಟ್ಟಿಗೆ, ಅರಣ್ಯ, ಔಷಧೀ ಮಾಲಿಕೆ, ರೈತರ ಕುಡಿಯುವ ನೀರಿನ ಮೂಲ ರಕ್ಷಣೆಗೆ ಕಾನುಗಳ ಉಳಿವು ಅತ್ಯವಶ್ಯ.
- ಶಿವಮೊಗ್ಗಾ ಜಿಲ್ಲೆಯ ಅರಣ್ಯಗಳಲ್ಲಿನ ವಿಶೇಷವಾದ 831 ವೃಕ್ಷಜಾತಿಗಳನ್ನು ಗುರುತಿಸಿ ವಿವರ ಮಾಹಿತಿ ನೀಡಲಾಗಿದೆ.
- ಶಿವಮೊಗ್ಗಾ ಜಿಲ್ಲೆಯಲ್ಲಿ ವಿನಾಶದ ಅಂಚಿನಲ್ಲಿರುವ 105 ಜಾತಿಯ ಸಸ್ಯ ಜಾತಿಗಳನ್ನು ವರದಿ ಪಟ್ಟಿಮಾಡಿ ಪ್ರಕಟಿಸಿದೆ.

## ಅಧ್ಯಯನ ವರದಿಯ ಕೆಲವು ಅಂಕಿ – ಸಂಖ್ಯೆ– ಇನ್ನಷ್ಟು ಮಾಹಿತಿ.

- ಶಿವಮೊಗ್ಗಾ ಜಿಲ್ಲೆಯಲ್ಲಿ 1643 ಕೆರೆಗಳಿವೆ. ಈ ಕೆರೆಗಳ ಒಟ್ಟೂ ಪ್ರದೇಶ 40630 ಹೆಕ್ಟೇರ್.
- **ಅರಣ್ಯ ಅತಿಕ್ರಮಣ ಶಿವಮೊಗ್ಗಾ ಜಿಲ್ಲೆಯಲ್ಲಿ ಈವರೆಗೆ (2012) ಒಟ್ಟೂ 36102 ಹೆಕ್ಟೇರ್ ಇದೆ.**

| | | | |
|---|---|---|---|
| ತೀರ್ಥಹಳ್ಳಿ ತಾ: | 1990 ಹೆಕ್ಟೇರ್. | ಹೊಸನಗರ ತಾ: | 3015 ಹೆಕ್ಟೇರ್. |
| ಸೊರಬ ತಾ: | 4210 ಹೆಕ್ಟೇರ್. | ಸಾಗರ ತಾ: | 5027 ಹೆಕ್ಟೇರ್. |
| ಶಿವಮೊಗ್ಗಾ ತಾ: | 5567 ಹೆಕ್ಟೇರ್. | ಶಿಕಾರಿಪುರ ತಾ: | 6776 ಹೆಕ್ಟೇರ್. |
| ಭದ್ರಾವತಿ ತಾ: | 9517 ಹೆಕ್ಟೇರ್. | | |

**ಅರಣ್ಯ ಅತಿಕಮಣ ಪ್ರಮಾಣ ಬಹಳೇ ಜಾಸ್ತಿ ಇವೆ. ಇದರಿಂದಾಗುವ ಗಂಭೀರ ಪಾರಿಸಾರಿಕ ಪರಿಣಾಮಗಳು.:**

ಅರಣ್ಯ ಪ್ರದೇಶ ಕಡಿಮೆ ಆಗಿದೆ, ಅರಣ್ಯ ಛಿದ್ರವಾಗಿದೆ, ಜೀವವೈವಿಧ್ಯತೆ ಕಡಿಮೆ ಆಗಿವೆ. ಸಸ್ಯ ಸಾಂಧ್ರತೆ ಕಡಿಮೆ ಆಗಿವೆ, ಅರಣ್ಯ ಸ್ವರೂಪದಲ್ಲೇ ಬದಲಾವಣೆ ಆಗಿವೆ, ನೈಸರ್ಗಿಕ ಪುನರುತ್ಪತ್ತಿ ಕುಂಠಿತ ಆಗಿದೆ, ಹೊರಗಿನ ಸಸ್ಯಕಳೆಗಳು ತುಂಬಿಕೊಳ್ಳುತ್ತವೆ, ವನ್ಯ ಜೀವಿಗಳು ಅತಂತ್ರವಾಗುತ್ತವೆ. ಸಸ್ಯಜಾತಿ/ ಪ್ರಭೇದಗಳು ಕಾಣೆಯಾಗಿವೆ, ಅರಣ್ಯ ದಿಂದ ಬರುವ ಉತ್ಪನ್ನ ಕಡಿಮೆ ಆಗಿವೆ. ಅರಣ್ಯದ ಆರ್ಥಿಕ ಆದಾಯ ಕಡಿಮೆ ಆಗಿದೆ. ಜಲಮೂಲ, ಜಲಾನಯನಕ್ಕೆ ಬಹಳ ಹೊಡೆತ ಬಿದ್ದಿದೆ. ಅರಣ್ಯ ನಿರ್ವಹಣೆ ವೆಚ್ಚ ಅಧಿಕಾಗುತ್ತದೆ.

- **ಶಿವಮೊಗ್ಗಾ ಜಿಲ್ಲೆಯ ಒಟ್ಟೂ ಅರಣ್ಯ ಪ್ರದೇಶ 8477 ಚ. ಕಿ.ಮೀ.** ಒಟ್ಟೂ ಭೂಭಾಗದ 51% ಅರಣ್ಯ ಪ್ರದೇಶವಾಗಿದೆ. ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರದ ಅರಣ್ಯ ಪ್ರದೇಶ ಸುಮಾರು 2305 ಚ. ಕಿ.ಮೀ.
- **ಶಿವಮೊಗ್ಗಾ ಜಿಲ್ಲೆಯ ಅರಣ್ಯವನ್ನು ಅರಣ್ಯೇತರ ಉದ್ದೇಶಕ್ಕೆ** ನೀಡಲಾಗಿದ್ದು ಮಾಹಿತಿ ಇಲ್ಲಿದೆ.: ಶರಾವತಿ ಜಲವಿದ್ಯುತ್ ಯೋಜನೆಗೆ 319 ಚ.ಕಿ.ಮೀ. ಭದ್ರಾ ಜಲಾಶಯ ಯೋಜನೆಗೆ 113 ಚ.ಕಿ.ಮೀ., ತುಂಗಾ ಜಲಾಶಯ ಯೋಜನೆಗೆ 13 ಚ.ಕಿ.ಮೀ. ಅಂಬ್ಲಿಗೊಳ ಜಲಾಶಯಕ್ಕೆ 6 ಚ.ಕಿ.ಮೀ. ಅರಣ್ಯ ನೀಡಲಾಗಿದೆ.
- 2005 ರಿಂದ 2011 ರವರೆಗೆ ಶಿವಮೊಗ್ಗಾ ಜಿಲ್ಲೆಯಲ್ಲಿ **36000 ಹೆಕ್ಟೇರ್ ಅರಣ್ಯ ಬೆಳೆಸಲಾಗಿದೆ.**
- **ಶೆಟ್ಟಿಹಳ್ಳಿ** ಅಭಯಾರಣ್ಯ 39560 ಹೆಕ್ಟೇರ್ ಪ್ರದೇಶ ಹೊಂದಿದೆ. 70 ಹಳ್ಳಿಗಳು ಈ ಅಭಯಾರಣ್ಯ ವ್ಯಾಪ್ತಿಯಲ್ಲಿದೆ.
- **ಶರಾವತಿ** ಅಭಯಾರಣ್ಯದ ವ್ಯಾಪ್ತಿ 431ಚ.ಕಿ.ಮೀ. 121 ಹಳ್ಳಿಗಳು ಈ ಅಭಯಾರಣ್ಯ ವ್ಯಾಪ್ತಿಯಲ್ಲಿವೆ.
- **ವಿನಾಶದ ಅಂಚಿನ ವೃಕ್ಷಗಳು:** ತೀರ್ಥಹಳ್ಳಿ ತಾ: ಹಾಲ್‌ಮಹಿಷಿ ಕಾನಿನಲ್ಲಿ ವಿನಾಶದ ಅಂಚಿನಲ್ಲಿರುವ IUCN REDLIST ಗೆ ಸೇರಿದ ಕೆರೆ ನೇರಳೆ (Syzygiumtravan Coricum) ಜಾತಿಯ ವೃಕ್ಷಗಳು ಕಂಡು ಬಂದಿವೆ. ಅದೇ ರೀತಿ ಕುಲ್ಲುಂಡೆ ಕಾನಿನಲ್ಲಿ ಮೂಪವ ಜಾತಿಗೆ ಸೇರಿದ ವಿಶಿಷ್ಠ ಪ್ರಭೇದದ (Diptero corpus indicus) ವೃಕ್ಷ ಸಮೂಹ ಕಂಡುಬಂದಿದೆ. ಇದು Endangered ಎಂದು ( IUCN) ನಿಂದ ಪ್ರಕಟವಾಗಿದ.
- ಅಂಬಾರಗುಡ್ಡದಂತಹ ಅತಿ ಎತ್ತರದ ಬೆಟ್ಟ ಪ್ರದೇಶವನ್ನು ಭಾರೀ ಗಣಿಗಾರಿಕೆಗೆ ಕೊಟ್ಟಿದ್ದು ಬಹಳ ಪರಿಸರ ಹಾನಿಗೆ ಕಾರಣವಾಗಿದೆ.
- ಈ ಅಧ್ಯಯನಗಳ ಸಂದರ್ಭದಲ್ಲಿ ಡಾ॥ಟಿ.ವಿ. ರಾಮಚಂದ್ರ, ಡಾ॥ಸುಭಾಸ್ ಚಂದ್ರನ್ ತಂಡ 2 **ಹೊಸ ಮೀನು ಜಾತಿಗಳನ್ನು, ಒಂದು ಹೊಸ ಕಪ್ಪೆ ಜಾತಿಯನ್ನು** ಕಂಡುಹಿಡಿದಿದ್ದಾರೆ. ಅವು ಯಾವುವೆಂದರೆ: 'ಸಿಸ್ಟೋರಾ ನಾಗೋಡಿಯನ್ಸಿಸ್' (Schistura Nagodiansis) ಮತ್ತು 'ಸಿಸ್ಟೋರಾಶರಾವತಿಯನ್ಸಿಸ್' (Schistura sharavatiansis) ಎಂಬ ಮೀನು ಜಾತಿಗಳನ್ನು ಕಂಡುಹಿಡಿಯಲಾಗಿದೆ. "ಫಿಲಾಟಸ್ ನೀಲನೇತ್ರ" (Philatus Neelanetra) ಎಂಬ ಹೊಸ ಕಪ್ಪೆಜಾತಿಯನ್ನು ಶರಾವತಿ ಕಣಿವೆಯ ಹೊಳೆಗಳಲ್ಲಿ ಕಂಡುಹಿಡಿದಿದ್ದಾರೆ.

## ಇತರ ಅಧ್ಯಯನಗಳು:

ಶಿವಮೊಗ್ಗಾ ಜಿಲ್ಲೆಯ ಕಾನು ಅರಣ್ಯ ಪರಿಸ್ಥಿತಿ ಕುರಿತು ಭಾರತೀಯ ವಿಜ್ಞಾನ ಸಂಸ್ಥೆ, ಡಾ॥ ಕೇಶವ ಕೊರ್ಸೆ, ಡಾ॥ ವಾಸುದೇವ ಇವರು ಅಧ್ಯಯನ ವರದಿ ನೀಡಿದ್ದಾರೆ. ಅಂಬಾರಗುಡ್ಡ ಪರಿಸ್ಥಿತಿ ಬಗ್ಗೆ ಡಾ॥ ಕೇಶವ್ ಕೊರ್ಸೆ ಅವರು ದೇವರಕಾಡುಗಳ ಬಗ್ಗೆ ಡಾ॥ ಸುಭಾಸ್ ಚಂದ್ರನ್, ಡಾ॥ ರಾಜಶ್ರೀ, ಅರಣ್ಯ ಸಮಿತಿಗಳ ಯಶೋಗಾಥೆ ಬಗ್ಗೆ ರಘುನಂದನ –ಶೈಲಜಾ ಅವರು ವರದಿ ನೀಡಿದ್ದಾರೆ. ಶರಾವತಿ ನದೀ ಕಣಿವೆ ಬಗ್ಗೆ ಡಾ॥ ಟಿ. ವಿ. ರಾಮಚಂದ್ರ ತಂಡ ವಿಶೇಷ ಅಧ್ಯಯನ ನಡೆಸಿದೆ. 20 ಹಳ್ಳಿಗಳ ಜೀವವೈವಿಧ್ಯ ದಾಖಲಾತಿ, ಪ್ರೊ. ಕುಮಾರಸ್ವಾಮಿ ವಿರಚಿತ ನದೀ ತಿರುವು ಯೋಜನೆಗಳ ವಿಶ್ಲೇಷಣೆ, ಡಾ॥ ಶ್ರೀಪತಿ ಇವರ ಬದಲೀ ಇಂಧನ ನೀತಿ ಕುರಿತು ವರದಿ/ ಪುಸ್ತಿಕೆ ಪ್ರಕಟವಾಗಿವೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

08384-223297